

# ಸಿಡಿಲಿನ ಸೃಷ್ಟಿ!

ಗಗನದಲ್ಲಿ ಮೊದಲ ಗುಡುಗು ಕೇಳಿಸಿದರೆ ಸಾಕು, ಭೂಮಿಯೊಳಗೆ ಅವಿತಿರುವ ಈ ಸೌಂದರ್ಯದ ರಾಣಿಯರು ಮೆಲ್ಲನೆ ಮೈಮುರಿದು ಏಳುತ್ತಾರೆ! ಪ್ರಥಮ ಮಳೆಯ ಸಿಂಚನವಾಗುವುದೇ ತಡ, ಎದ್ದು ನಿಲ್ಲುತ್ತಾರೆ. ಕೆಲವೇ ದಿನಗಳಲ್ಲಿ ಹಸಿರು ಎಲೆಗಳ ನಡುವೆ ಮೆಲ್ಲಗೆ ಮುತ್ತಿನಂತಹ ನಗು ಬೀರುತ್ತಾರೆ! ಈ ಬಣ್ಣ ಬಣ್ಣದ ಹೂಗಳನ್ನು ನೋಡಿದರೆ 'ಸಿಡಿಲಿಗೆ ಸಿಡಿದವರು' ಎನ್ನಲಾದೀತೆ?

ಎಲ್ಲಿಂದ ಬಂದವು ಈ ಹೂಗಳು? ಗುಡುಗು ಬರುವ ಮೊದಲು ಇವುಗಳು ಎಲ್ಲಿದ್ದವು? ಯಾರು, ಯಾವಾಗ ಇದನ್ನು ನಾಟಿ ಮಾಡಿದರು? ಯಾರು ಇದಕ್ಕೆ ನೀರು–ಗೊಬ್ಬರ ಉಣಿಸಿ ಪೋಷಿಸಿದರು? ಯಾರು ಬಿತ್ತಿದರು? ಪ್ರಕೃತಿ ನಿಜಕ್ಕೂ ಒಂದು ಅದ್ಭುತ ಲೋಕ. ಇಲ್ಲಿಯ ವಿಸ್ಮಯಗಳು ನೂರೆಂಟು!

ಮಿಂಚು, ಗುಡುಗು ಮತ್ತು ಮಳೆ ಬಿದ್ದೊಡನೆ ಭೂಮಿ ಅದುರಿ ಮೆಲ್ಲನೆ ಹೊರಬರುತ್ತವೆ ಈ ಹೂಗಳು. ಮನೆಯಂಗಳದಲ್ಲಿ, ತೋಟದ ಬದಿಗಳಲ್ಲಿ, ರಸ್ತೆಯ ಅಕ್ಕಪಕ್ಕದಲ್ಲಿ, ನೀರು ಹರಿದು ಹೋಗುವ ಜಾಗಗಳಲ್ಲಿ– ಹೀಗೆ ಎಲ್ಲೆಂದರಲ್ಲಿ! ಭೂಮಿಯಾಳದಲ್ಲಿ ಹುದುಗಿ ಹೋದ ಸಣ್ಣ ಗೆಡ್ಡೆಗಳು ಚಿಗುರಿ ಎಲೆಗಳಂತೆ ಮೇಲೆ ಬಂದು ಅದರ ನಡುವೆ ಉದ್ದನೆಯ ತೊಟ್ಟಿನ ತುದಿಯಲ್ಲಿ ಅರಳಿ ನಿಲ್ಲುವ ಲಿಲ್ಲಿ ಜಾತಿಗೆ ಸೇರಿದ ಕೆಲವು ಹೂಗಳು ಸಾಮಾನ್ಯವಾಗಿ ಏಪ್ರಿಲ್ – ಮೇ ತಿಂಗಳಲ್ಲಿ ಅರಳುವುದು ಕಂಡು ಬರುತ್ತವೆ. ನಂತರ ಮಳೆ ಜೋರಾದಾಗ ಹೂವುಗಳು ಅರಳುವುದಿಲ್ಲ. ಮಳೆನಿಂತು ಹೋದಮೇಲೆ ಇದರ ಎಲೆಕಾಂಡಗಳು ಒಣಗಿ ಭೂಮಿಯೊಳಗೆ ಗೆಡ್ಡೆಯ ರೂಪದಲ್ಲಿ ಅಡಗಿರುತ್ತವೆ. ಮತ್ತೊಂದು ಗುಡುಗು ಮಳೆಗೆ ಕಾಯುವ ಈ ಹೂವಿನ ಪರಿಯೇ ಅದ್ಭುತ.

ಇದರಲ್ಲಿಯೇ ಇನ್ನೊಂದು ವಿಧವಿದೆ. ಉದ್ದಕ್ಕೆ ಹೊಳೆಯುವ ಎಲೆಗಳ ನಡುವೆ ಉದ್ದನೆಯ ತೊಟ್ಟಿನ ತುದಿಯಲ್ಲಿ ಚೆಂಡಿನಂತೆ ಅರಳಿ ನಿಲ್ಲುವ ಕೆಂಪು ಅಥವಾ ನಸುಗುಲಾಬಿ ಬಣ್ಣದ ಥಂಡರ್ ಲಿಲ್ಲಿ! ನೂರಾರು ರೇಷ್ಮೆಯ ನವಿರುದಾರಗಳಂತೆ ಕಾಣುವ ಶಲಾಕೆ-ಗಳನ್ನು ಹೊಂದಿರುವ ಈ ಹೂವಿನ ಮೇಲೆ ಹನಿ ನೀರು ಬಿದ್ದರೆ ಸಾಕು ಶಲಾಕಾಗ್ರಗಳಲ್ಲಿ ಹೊಳೆಯುವ ಮುತ್ತಿನ ಮಣಿಗಳ ಸಾಲು!

ಫುಟ್ಬಾಲ್ ಲಿಲ್ಲಿ, ಮಂಥ್ ಲಿಲ್ಲಿ, ಕೆಂಪು ಲಿಲ್ಲಿ ಎಂದು ಕರೆಯುವ ಇದರ ಸಸ್ಯಶಾಸ್ತ್ರೀಯ ಹೆಸರು ಹೆಮಂತಸ್ ಮಲ್ಟಿಫ್ಲೋರಸ್. ಮೊದಲ ಗುಡುಗು ಮಳೆಗೆ ಭೂಮಿ ನಡುಗಿದಾಗ ಭೂಗರ್ಭದಿಂದ ಹೊರಬರುವ ಹೆಸರೇ ತಿಳಿಯದ ಇನ್ನೂ ಅನೇಕಾನೇಕ ಕಣ್ಮನ ಸೆಳೆಯುವ ಹೂಗಳಿವೆ. ಯಾರೂ ನೆಟ್ಟು ಬೆಳೆಸದೇ ಇದ್ದರೂ, ತನ್ನಿಂದ ತಾನೆ ಹುಟ್ಟಿ ಬೆಳೆದು ಚೆಲುವಿನಿಂದ ಎಲ್ಲರ ಗಮನ ಸೆಳೆವ, ಸಿಡಿಲಿನ ಬೆನ್ನಲ್ಲೆ ವಸುಂಧರೆಯ ಗರ್ಭದಿಂದ ಹೊರಬರುವ ಈ ವಿಸ್ಮಯಕ್ಕೆ ಮನಸ್ಸೂ ಮೂಕವಿಸ್ಮಿತ!

■ ಗೀತಸದಾ ಮೋಂತಿಮಾರು



